RNU AIR DHARWAD

# FEBRUARY 14, 2025

## AKASHAVANI - DHARWAD

## PRADESH SAMACHARA (KANNADA) 07.05 A.M.

<><><>

**ಆಕಾಶವಾಣಿ**

**ಪ್ರದೇಶ ಸಮಾಚಾರ**

**ಓದಿದವರು: ಹರ್ಷವರ್ಧನ ಶೀಲವಂತ**

<><><>

- **ರಾಷ್ಟ್ರಪತಿ ದ್ರೌಪದಿ ಮುರ್ಮು** ಇಂದು ಬೆಂಗಳೂರಿಗೆ; 10ನೇ ಅಂತಾರಾಷ್ಟ್ರೀಯ ಮಹಿಳಾ ಸಮ್ಮೇಳನದಲ್ಲಿ, ಭಾಗಿ.
- **ಹಲಸು ಮತ್ತು ನೇರಳೆ ಹಣ್ಣು** ಅಭಿವೃದ್ಧಿ ಮಂಡಳಿ ರಚನೆಗೆ, ಎಚ್.ಡಿ.ದೇವೇಗೌಡ, ಕೇಂದ್ರಕ್ಕೆ ಮನವಿ.
- **ವರದಾ ನದಿ ಅಭಿವೃದ್ಧಿ** ಯೋಜನೆ; ಶಿವಮೊಗ್ಗ ಜಿಲ್ಲೆ, ಸೊರಬ ತಾಲೂಕಿನ, 3 ಸಾವಿರ ಎಕರೆ ಕೃಷಿಗೆ, ನೀರಿನಾಸರೆ.
- **ವಿಶೇಷಚೇತನ ವಿದ್ಯಾರ್ಥಿಗಳಿಗೆ,** ರಾಜ್ಯದ 900 ವಸತಿ ಶಾಲೆಗಳಲ್ಲಿ ನೇರ ಪ್ರವೇಶ.

<><><>

**ಬೆಂಗಳೂರಿನ ಆರ್ಟ್ ಆಫ್ ಲಿವಿಂಗ್** ಅಂತಾರಾಷ್ಟ್ರೀಯ ಕೇಂದ್ರದಲ್ಲಿ, ಇಂದಿನಿಂದ ಎರಡು ದಿನ ಆಯೋಜಿತ, 10ನೇ ಅಂತಾರಾಷ್ಟ್ರೀಯ ಮಹಿಳಾ ಸಮ್ಮೇಳನದಲ್ಲಿ, ರಾಷ್ಟ್ರಪತಿ ದ್ರೌಪದಿ ಮುರ್ಮು ಭಾಗವಹಿಸಲಿದ್ದಾರೆ. ರಾಜಕೀಯ, ಉದ್ಯಮ, ಕಲೆ ಮತ್ತು ಸಾಮಾಜಿಕ ವಲಯ ಸೇರಿದಂತೆ, 115 ದೇಶಗಳ 6 ಸಾವಿರ ಪ್ರತಿನಿಧಿಗಳು ಈ ಸಮ್ಮೇಳನದಲ್ಲಿ ಭಾಗವಹಿಸಲಿದ್ದಾರೆ. 60ಕ್ಕೂ ಹೆಚ್ಚು ಭಾಷಣಕಾರರು ಮತ್ತು 500 ಕ್ಕೂ ಹೆಚ್ಚು ಪ್ರತಿನಿಧಿಗಳು ಪಾಲ್ಗೊಳ್ಳಲಿದ್ದಾರೆ.

<><><>

**ರಾಜ್ಯಪಾಲ ಥಾವರ್‌ಚಂದ್ ಗೆಹ್ಲೋಟ್,** ಕೇಂದ್ರ ಸಚಿವರಾದ ಅನ್ನಪೂರ್ಣಾ ದೇವಿ, ಶೋಭಾ ಕರಂದ್ಲಾಜೆ, ಮೀನಾಕ್ಷಿ ಲೇಖಿ, ಕಾಮನ್‌ವೆಲ್ತ್ ಪ್ರಧಾನ ಕಾರ್ಯದರ್ಶಿ ಪೆಟ್ರೀಷಿಯಾ, ಜಪಾನ್‌ನ ಮಾಜಿ ಪ್ರಧಾನಿ ಶಿಂಜೊ ಅಬೆ ಅವರ ಪತ್ನಿ ಅಕಿ ಅಬೆ ಭಾಗವಹಿಸಲಿದ್ದಾರೆ.

<><><>

**ಈ ಸಮ್ಮೇಳನದ** ಆದಾಯವನ್ನು ಹೆಣ್ಣು ಮಕ್ಕಳ ಶಿಕ್ಷಣಕ್ಕೆ ಬಳಸಲು ನಿರ್ಧರಿಸಲಾಗಿದೆ.

<><><>

**'ಮಖಾನಾ' ಉತ್ಪಾದನೆ** ಹಾಗೂ ಮೌಲ್ಯವರ್ಧನೆಗೆ, ಬಿಹಾರದಲ್ಲಿ ನೂತನ ಮಖಾನಾ ಮಂಡಳಿಯನ್ನಯ, ಕೇಂದ್ರದ ಬಜೆಟ್‌ನಲ್ಲಿ ಘೋಷಿಸಿದಂತೆ, ರಾಜ್ಯದ ಹಲಸಿನ ಹಣ್ಣು, ನೇರಳೆ ಹಣ್ಣಿಗೂ ಮಂಡಳಿ ರಚಿಸುವಂತೆ, ರಾಜ್ಯಸಭೆ ಸಂಸದ ಎಚ್.ಡಿ.ದೇವೇಗೌಡ, ಕೇಂದ್ರ ಹಣಕಾಸು ಖಾತೆ ಸಚಿವರಿಗೆ ಮನವಿ ಮಾಡಿದ್ದಾರೆ. ಮಾಜಿ ಪ್ರಧಾನಮಂತ್ರಿ ದೇವೇಗೌಡರು, ರಾಜ್ಯಸಭೆಯಲ್ಲಿ ಕೇಂದ್ರ ಬಜೆಟ್ ಮೇಲಿನ ಚರ್ಚೆಯಲ್ಲಿ ಭಾಗವಹಿಸಿ, ಮಾತನಾಡಿದರು. ಕಾವೇರಿ ಹಾಗೂ ಗೋದಾವರಿ ನದಿ ಯೋಜನೆ ಸೇರಿದಂತೆ, ಕರ್ನಾಟಕದ ನೀರಾವರಿ ಯೋಜನೆಗಳನ್ನು, ಕಾಲಮಿತಿಯಲ್ಲಿ ಅನುಷ್ಠಾನ ಗೊಳಿಸುವಂತೆ, ಅವರು ಒತ್ತಾಯಿಸಿದರು.

<><><>

**ಬಸವ ರಾಷ್ಟ್ರೀಯ ಪ್ರಶಸ್ತಿಗೆ,** ಧಾರವಾಡದ ಎಸ್.ಆರ್. ಗುಂಜಾಳ, ಭಗವಾನ್ ಮಹಾವೀರ ರಾಷ್ಟ್ರೀಯ ಶಾಂತಿ ಪ್ರಶಸ್ತಿಗೆ, ಬೆಂಗಳೂರಿನ ಪಂಡಿತರತ್ನ ಎ. ಶಾಂತಿರಾಜ ಶಾಸ್ತ್ರಿ ಟ್ರಸ್ಟ್, ಟಿ.ಚೌಡಯ್ಯ ರಾಷ್ಟ್ರೀಯ ಪ್ರಶಸ್ತಿಗೆ, ಬಾಗಲಕೋಟೆಯ ಬಸವಪ್ಪ ಭಜಂತ್ರಿ ಹಾಗೂ ಗಾನಯೋಗಿ ಪಂಡಿತ ಪಂಚಾಕ್ಷರಿ ಗವಾಯಿ ರಾಷ್ಟ್ರೀಯ ಪ್ರಶಸ್ತಿಗೆ, ಮುಂಬೈನ ಬೇಗಂ ಪರ್ವಿನ್ ಸುಲ್ತಾನ ಅವರು ಭಾಜನರಾಗಿದ್ದಾರೆ ಎಂದು, ಕನ್ನಡ ಮತ್ತು ಸಂಸ್ಕೃತಿ ಖಾತೆ ಸಚಿವ, ಶಿವರಾಜ ತಂಗಡಗಿ ಪ್ರಕಟಿಸಿದ್ದಾರೆ. ಸಚಿವರು ವಿಕಾಸಸೌಧದಲ್ಲಿ ಸುದ್ದಿಗೋಷ್ಠಿ ನಡೆಸಿದರು.

<><><>

**ಅಕ್ಕಮಹಾದೇವಿ ಪ್ರಶಸ್ತಿಗೆ,** ಧಾರವಾಡದ ಹೇಮಾ ಪಟ್ಟಣಶೆಟ್ಟಿ, ಪಂಪ ಪ್ರಶಸ್ತಿಗೆ ದಕ್ಷಿಣಕನ್ನಡದ ಬಿ.ಎ.ವಿವೇಕ ರೈ, ಗುಬ್ಬಿ ವೀರಣ್ಣ ಪ್ರಶಸ್ತಿಗೆ ವಿಜಯನಗರದ ಮರಿಯಮ್ಮನಹಳ್ಳಿಯ ಕೆ.ನಾಗರತ್ನಮ್ಮ, ಜಾನಪದ ಶ್ರೀ ಪ್ರಶಸ್ತಿಗೆ ಕಲಬುರಗಿಯ ಲಿಂಗಪ್ಪ ಭಜಂತ್ರಿ ಭಾಜನರಾಗಿದ್ದಾರೆ.

<><><>

**ಶ್ರೀ ನಿಜಗುಣ ಪುರಂದರ ಪ್ರಶಸ್ತಿಗೆ,** ಹಿಂದೂಸ್ಥಾನಿ ಗಾಯಕ, ಬೆಳಗಾವಿಯ ಅನಂತ ತೇರದಾಳ, ಸೇರಿದಂತೆ ನಾಡಿನ ಅನೇಕ ಗಣ್ಯರಿಗೆ ಪ್ರಶಸ್ತಿ ಪ್ರಕಟಿಸಲಾಗಿದೆ.

<><><>

**ರಾಷ್ಟ್ರೀಯ ಪ್ರಶಸ್ತಿ ತಲಾ 10 ಲಕ್ಷ ರೂಪಾಯಿ,** ಇತರೆ ಪ್ರಶಸ್ತಿಗಳು ತಲಾ 5 ಲಕ್ಷ ರೂಪಾಯಿ, ನಗದು ಹಾಗೂ ಸ್ಮರಣಿಕೆ ಒಳಗೊಂಡಿದೆ.

<><><>

**ಧಾರವಾಡ ಜಿಲ್ಲೆಯಲ್ಲಿ ಪ್ರಸಕ್ತ ಸಾಲಿನ,** ಎಸ್.ಎಸ್.ಎಲ್.ಸಿ. ಹಂತದ ಫಲಿತಾಂಶ ಸುಧಾರಣೆ, ಕಲಿಕೆ ಮತ್ತು ಬೋಧನೆ ಗುಣಮಟ್ಟದ ಮೌಲ್ಯವರ್ಧನೆಗಾಗಿ, ವಿದ್ಯಾರ್ಥಿ ಮತ್ತು ಶಿಕ್ಷಕರಿಗೆ ಒಳನೋಟ ಸಹಿತ ತರಬೇತಿ ನೀಡಲು, ಸಾರ್ವಜನಿಕ ಶಿಕ್ಷಣ ಇಲಾಖೆ ಸಹಯೋಗದಲ್ಲಿ, ಮಿಷನ್ ವಿದ್ಯಾಕಾಶಿ ಯೋಜನೆ ಜಾರಿಗೊಂಡಿದೆ. ಕ್ಷೇತ್ರ ಪರಿಣಿತ ಸಂಪನ್ಮೂಲ ವ್ಯಕ್ತಿಗಳು, ವಿಷಯ ತಜ್ಞ ಶಿಕ್ಷಕರು ಜೊತೆಗೂಡಿ, ವಿದ್ಯಾರ್ಥಿಗಳಿಗೆ ತರಬೇತಿ, ಮಾರ್ಗದರ್ಶನ ಹಾಗೂ ಪರೀಕ್ಷಾ ಭಯ ನಿವಾರಿಸಿ, ಆತ್ಮ ವಿಶ್ವಾಸದೊಂದಿಗೆ ಪರೀಕ್ಷೆ ಎದುರಿಸಿ, ಫಲಿತಾಂಶ ಉತ್ತಮ ಪಡಿಸಲು ಜಿಲ್ಲಾಡಳಿತ ಯೋಜಿಸಿದೆ. ಪ್ರದೇಶ ಸಮಾಚಾರಕ್ಕಾಗಿ, 'ಮಿಷನ್ ವಿದ್ಯಾಕಾಶಿ' ಬಗ್ಗೆ ಮಾಹಿತಿ ನೀಡಿದ್ದಾರೆ, ಧಾರವಾಡ ಜಿಲ್ಲಾಧಿಕಾರಿ ದಿವ್ಯಾ ಪ್ರಭು.

<><><>

**ರಾಜ್ಯದ ಎಲ್ಲ 900 ವಸತಿ ಶಾಲೆಗಳಲ್ಲಿ**, ಶೇಕಡ 25 ರಷ್ಟು ಅಂಗವೈಕಲ್ಯವಿರುವ ವಿಶೇಷ ಚೇತನ ವಿದ್ಯಾರ್ಥಿಗಳಿಗೆ, ನೇರ ಪ್ರವೇಶ ಕಲ್ಪಿಸಿ, ಪಿ.ಯು.ಸಿ. ವರೆಗೆ ಉಚಿತ ಶಿಕ್ಷಣ ಪಡೆಯುವ ಅವಕಾಶವನ್ನು, ರಾಜ್ಯ ಸರ್ಕಾರ ಕಲ್ಪಿಸಿರುವುದು ದೇಶಕ್ಕೆ ಮಾದರಿ ಎಂದು, ಅಂಗವಿಕಲರ ಅಧಿ ನಿಯಮ ಅನು ್ಠಾನ ರಾಜ್ಯ ಆಯುಕ್ತ, ದಾಸ್ ಸೂರ್ಯವಂಶಿ ತಿಳಿಸಿದ್ದಾರೆ. ವಿಜಯನಗರ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ, ಪ್ರಗತಿ ಪರಿಶೀಲನಾ ಸಭೆ ನಡೆಸಿದರು. ವಿಶೇಷಚೇತನರಿಗೆ ಸೌಕರ್ಯ ಕಲ್ಪಿಸುವಲ್ಲಿ, ವಿಜಯನಗರ ಜಿಲ್ಲೆ ರಾಜ್ಯಕ್ಕೆ ಮಾದರಿ. ರಾಜ್ಯದಲ್ಲಿ 7 ಸಾವಿರ ವಿಶೇಷಚೇತನರು ರಾಜ್ಯ ಸರ್ಕಾರದ ಸ್ಥಳೀಯ ಸಂಸ್ಥೆಗಳಲ್ಲಿ ಕಾರ್ಯನಿರ್ವಹಿಸಲು, ಅವಕಾಶ ಕಲ್ಪಿಸಲಾಗಿದೆ ಎಂದರು.

<><><>

**ವರದಾ ನದಿ ಅಭಿವೃದ್ಧಿ** ಯೋಜನೆಯಿಂದ, ಶಿವಮೊಗ್ಗ ಜಿಲ್ಲೆ, ಸೊರಬ ತಾಲೂಕಿನ, 39 ಗ್ರಾಮಗಳಿಗೆ ಶುದ್ಧ ಕುಡಿಯುವ ನೀರು ಪೂರೈಸಲು, ಕೆರೆ–ಕಟ್ಟೆ–ಕಾಲುವೆಗಳನ್ನು ಭರ್ತಿ ಮಾಡಲು ಸಹಕಾರಿಯಾಗಲಿದೆ ಎಂದು, ಜಿಲ್ಲಾ ಉಸ್ತುವಾರಿ ಸಚಿವ ಮಧು ಬಂಗಾರಪ್ಪ ತಿಳಿಸಿದ್ದಾರೆ. ಸೊರಬ ತಾಲೂಕಿನ ಕಡಸೂರು ಗ್ರಾಮದಲ್ಲಿ, 53 ಕೋಟಿ ರೂಪಾಯಿ ವೆಚ್ಚದಲ್ಲಿ, ವಿವಿಧ ಗ್ರಾಮಗಳ ಬ್ಯಾರೇಜ್ ನಿರ್ಮಾಣ ಕಾಮಗಾರಿಗೆ, ಶಂಕು ಸ್ಥಾಪನೆ ನೆರವೇರಿಸಿ, ಮಾತನಾಡಿದರು.

3 ಸಾವಿರದ 13 ಎಕರೆ ಕೃಷಿ ಚಟುವಟಿಕೆಗೆ ಅನುಕೂಲವಾಗಲಿದೆ. ಅಂತರ್ಜಲ ಮಟ್ಟ ಸಹ ವೃದ್ಧಿಯಾಗಲಿದೆ ಎಂದರು. ಕಡಸೂರು ಹಾಗೂ ಲಕ್ಕವಳ್ಳಿಯ, ಜೈನ ಬಸದಿ ಸಮೀಪ, 495 ಲಕ್ಷ ರೂಪಾಯಿ ವೆಚ್ಚದಲ್ಲಿ, ಪ್ರವಾಹ ಬಾಧಿತ ಪ್ರದೇಶದ ತಡೆಗೋಡೆ ನಿರ್ಮಾಣ ಕಾಮಗಾರಿಗೆ ಅವರು ಚಾಲನೆ ನೀಡಿದರು.

<><><>

**ಸಣ್ಣ ನೀರಾವರಿ ಖಾತೆ ಸಚಿವ** ಎನ್. ಎಸ್. ಬೋಸರಾಜು ಮಾತನಾಡಿ, ರಾಜ್ಯದಲ್ಲಿ 52 ಸಾವಿರ ಕೋಟಿ ರೂಪಾಯಿ ವೆಚ್ಚದ, ಕಾಮಗಾರಿಗಳನ್ನು ಏಕ ಗವಾಕ್ಷಿ ಯೋಜನೆ ಅಡಿ, ಪಾರದರ್ಶಕವಾಗಿ ಕೈಗೆತ್ತಿಕೊಳ್ಳಲಾಗಿದೆ ಎಂದರು.

<><><>

900 ಕೋಟಿ ರೂಪಾಯಿ ವೆಚ್ಚದ ದಂಡಾವತಿ ಯೋಜನೆ, 600 ಕೋಟಿ ರೂಪಾಯಿ ಅಂದಾಜು ವೆಚ್ಚದ, 3 ಪಟ್ಟಣ ಹಾಗೂ 354 ಹಳ್ಳಿಗಳಿಗೆ ಶರಾವತಿ ನದಿ ಶುದ್ಧ ಕುಡಿಯುವ ನೀರು ಒದಗಿಸುವ ಯೋಜನೆಗೆ ಶೀಘ್ರ ಚಾಲನೆ ನೀಡಲಾಗುವುದು ಎಂದರು.

<><><>

**'ಬಾನುಲಿ ರೈತರ ದಿನ'ವನ್ನು ನಾಳೆ**, ದೇಶಾದ್ಯಂತ ಆಚರಿಸಲಾಗುತ್ತಿದೆ. 'ಕಿಸಾನ್ ವಾಣಿ' ಕಾರ್ಯಕ್ರಮದ ಮೂಲಕ, ಕೃಷಿ ಯೋಜನೆಗಳ ಬಗ್ಗೆ ಮಾಹಿತಿ ಹಾಗೂ ರೈತರ ಪ್ರಶ್ನೆಗಳಿಗೆ ಉತ್ತರಿಸಲು, ಆಕಾಶವಾಣಿ ಸಜ್ಜಾಗಿದೆ.

<><><>

**ಆಕಾಶವಾಣಿ ಭದ್ರಾವತಿ ಕೇಂದ್ರ**, ಶಿವಮೊಗ್ಗ ನವುಲೆಯ, ಕೆಳದಿ ಶಿವಪ್ಪ ನಾಯಕ ಕೃಷಿ ಮತ್ತು ತೋಟಗಾರಿಕೆ ವಿಶ್ವವಿದ್ಯಾಲಯದ ಸಭಾಂಗಣದಲ್ಲಿ, ಇಂದು ಬೆಳಗ್ಗೆ 10.30ಕ್ಕೆ, 'ರೇಡಿಯೋ ಕಿಸಾನ್ ದಿನಾಚರಣೆ' ಹಿನ್ನೆಲೆ, ರೈತರಿಗೆ ಸನ್ಮಾನ ಹಾಗೂ ಕಾರ್ಯಾಗಾರ ಆಯೋಜಿಸಿದೆ.

<><><>

**ಆಯುರ್ವೇದ ಔ 'ಧಿಯ ಸಸ್ಯ ಕಾಶಿ**, ಗದಗ ಜಿಲ್ಲೆ, ಮುಂಡರಗಿ ತಾಲೂಕಿನ ಕಪ್ಪತಗುಡ್ಡದಲ್ಲಿ, ಬಂಗಾರಕೊಳ್ಳದ ಬಳಿ, ಸಾವಿರ ಎಕರೆಯಷ್ಟು ಅಮೂಲ್ಯ ಸಸ್ಯ ಸಂಪತ್ತು, ಕಾಡ್ಗಿಚ್ಚಿಗೆ ಆಹುತಿಯಾಗಿದೆ. ಡೋಣಿ ಗ್ರಾಮದ ಬಳಿ ಗುಡ್ಡಕ್ಕೆ ಬೆಂಕಿ ತಗುಲಿದ ಪರಿಣಾಮ, ನಂದಿವೇರಿ ಮಠದ ಹಿಂಭಾಗ, ಬಂಗಾರಕೊಳ್ಳ, ದೊಡ್ಡ ಬಂಗಾರಕೊಳ್ಳ, ಉಪ್ಪಾರ ತಟ್ಟು, ನವಣೆ ರಾಶಿ, ಎತ್ತಿನಗುಡ್ಡದಲ್ಲಿ ಅಪಾರ ಪ್ರಮಾಣದ ಕಾಡು ನಾಶವಾಗಿದೆ. ಅರಣ್ಯ ಇಲಾಖೆ ಸಿಬ್ಬಂದಿ, ಸತತ ಪ್ರಯತ್ನದಿಂದ ಬೆಂಕಿ ನಂದಿಸಲಾಗಿದೆ. ನಂದಿವೇರಿ ಸಂಸ್ಥಾನ ಮಠದ ಶ್ರೀ ಶಿವಕುಮಾರ ಸ್ವಾಮೀಜಿ ಕಪ್ಪತಗುಡ್ಡವನ್ನು ಬೆಂಕಿ ಆಕಸ್ಮಿಕದಿಂದ ರಕ್ಷಿಸುವಂತೆ, ಮನವಿ ಮಾಡಿದ್ದಾರೆ.

<><><>

**ಹಾಲಕ್ಕಿ ಒಕ್ಕಲಿಗ ಜಾನಪದ ಕಥಾನಕದ ಕಣಜ**, ಪದ್ಮಶ್ರೀ, ಸುಕ್ರಿ ಬೊಮ್ಮುಗೌಡ ಅವರ ಪಾರ್ಥಿವ ಶರೀರದ ಅಂತ್ಯಕ್ರಿಯೆ, ಸಕಲ ಸರ್ಕಾರಿ ಗೌರವಗಳೊಂದಿಗೆ, ಉತ್ತರಕನ್ನಡ ಜಿಲ್ಲೆ, ಅಂಕೋಲಾ ತಾಲೂಕಿನ, ಬಡಗೇರಿಯಲ್ಲಿ ನೆರವೇರಿತು. ವಯೋ ಸಹಜ ಅನಾರೋಗ್ಯದಿಂದ ಬಳಲುತ್ತಿದ್ದ, 88 ವರ್ಷದ ಸುಕ್ರಿ ಬೊಮ್ಮುಗೌಡರು, ನಿನ್ನೆ ಬೆಳಗಿನ ಜಾವ ನಿಧನರಾದರು. ಗಣ್ಯರು ಕಂಬನಿ ಮಿಡಿದಿದ್ದಾರೆ.

<><><>

**ಭಾರತೀಯ ನೌಕಾ ಪಡೆಯ**, ಚೆನ್ನೈ ವಿಭಾಗದಲ್ಲಿ ಕರ್ತವ್ಯ ನಿರ್ವಹಣೆ ವೇಳೆ, ಬೆಳಗಾವಿ ಜಿಲ್ಲೆ, ಗೋಕಾಕ ತಾಲೂಕು, ಕಲ್ಲೋಳಿಯ ಯೋಧ ಪ್ರವೀಣ ಸುಭಾಸ ಖಾನಗೌಡ್ರ ನಿಧನರಾಗಿದ್ದಾರೆ. 24 ವರ್ಷದ ಪ್ರವೀಣ, ಕಳೆದ 5 ವರ್ಷಗಳಿಂದ ಭಾರತೀಯ ನೌಕಾ ಪಡೆಯಲ್ಲಿ ಸೇವೆ ಸಲ್ಲಿಸುತ್ತಿದ್ದರು. ಕಲ್ಲೋಳಿ ಪಟ್ಟಣ ಪಂಚಾಯ್ತಿ ಬಳಿ, ಸಕಲ ಸರ್ಕಾರಿ ಗೌರವಗಳೊಂದಿಗೆ, ಇಂದು ಬೆಳಗ್ಗೆ 11 ಗಂಟೆಗೆ, ಪಾರ್ಥಿವ ಶರೀರದ ಅಂತ್ಯಕ್ರಿಯೆ ನಡೆಯಲಿದೆ. ಗಣ್ಯರು ಕಂಬನಿ ಮಿಡಿದಿದ್ದಾರೆ.

<><><>

**ಬೆಂಗಳೂರು ಮೆಟ್ರೊ ರೈಲು ನಿಗಮದ ವ್ಯವಸ್ಥಾಪಕ** ನಿರ್ದೇಶಕರು, ದರ ಏರಿಕೆ ಪರಿಷ್ಕರಿಸಿದ್ದು, ಇಂದಿನಿಂದ ಹೊಸ ದರ ಜಾರಿಗೊಳ್ಳಲಿದೆ ಎಂದು ತಿಳಿಸಿದ್ದಾರೆ.

<><><>

**ಸುಳ್ಳು ಸುದ್ದಿಗಳನ್ನು ತಡೆಯುವ ಸವಾಲು** ಮತ್ತು ನಿಖರತೆ ಹಾಗೂ ವಾಸ್ತವಾಂಶಗಳನ್ನು ಪರಿಶೀಲಿಸಲು, ಫ್ಯಾಕ್ಟ್ ಚೆಕ್ ಆರಂಭಿಸಲಾಗಿದೆ ಎಂದು, ಮುಖ್ಯಮಂತ್ರಿಯವರ ಮಾಧ್ಯಮ ಸಲಹೆಗಾರ, ಕೆ.ವಿ.ಪ್ರಭಾಕರ್ ಕೋಲಾರದಲ್ಲಿ ತಿಳಿಸಿದ್ದಾರೆ.

<><><>

**ರಾಷ್ಟ್ರೀಯ ಮಕ್ಕಳ ಹಕ್ಕುಗಳ ರಕ್ಷಣಾ** ಆಂದೋಲನದ ಅಂಗವಾಗಿ, ಆಯೋಜಿಸಿದ ಜಾಥಾ ವೇಳೆ, ಧಾರವಾಡ ಜಿಲ್ಲೆ, ಹುಬ್ಬಳ್ಳಿಯ ಪಾನ್ ಬಜಾರ್‌ನಲ್ಲಿ ಓರ್ವ ಕಿಶೋರ ಕಾರ್ಮಿಕನನ್ನು ರಕ್ಷಿಸಲಾಗಿದೆ.

<><><>

- **ರಾಷ್ಟ್ರಪತಿ ದ್ರೌಪದಿ ಮುರ್ಮು** ಇಂದು ಬೆಂಗಳೂರಿಗೆ; 10ನೇ ಅಂತಾರಾಷ್ಟ್ರೀಯ ಮಹಿಳಾ ಸಮ್ಮೇಳನದಲ್ಲಿ, ಭಾಗಿ.
- **ಹಲಸು ಮತ್ತು ನೇರಳೆ ಹಣ್ಣು** ಅಭಿವೃದ್ಧಿ ಮಂಡಳಿ ರಚನೆಗೆ, ಎಚ್.ಡಿ.ದೇವೇಗೌಡ, ಕೇಂದ್ರಕ್ಕೆ ಮನವಿ.
- **ವರದಾ ನದಿ ಅಭಿವೃದ್ಧಿ** ಯೋಜನೆ; ಶಿವಮೊಗ್ಗ ಜಿಲ್ಲೆ, ಸೊರಬ ತಾಲೂಕಿನ, 3 ಸಾವಿರ ಎಕರೆ ಕೃಷಿಗೆ, ನೀರಿನಾಸರೆ.
- **ವಿಶೇಷಚೇತನ ವಿದ್ಯಾರ್ಥಿಗಳಿಗೆ,** ರಾಜ್ಯದ 900 ವಸತಿ ಶಾಲೆಗಳಲ್ಲಿ ನೇರ ಪ್ರವೇಶ.

<><><>